# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: 2015-16ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ 2215 (ಯೋಜನೆ) ಅಡಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಯಡಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಗ್ರಾ.ಅ.&.ಪಂ.ರಾಜ್ ಇಲಾಖೆಯ ಕಡತ ಸಂ.ಗ್ರಾಅಪ/125/ಗ್ರಾಕುನೀ&ನೈಇ/ಸ್ವಭಾಮಿ/2015
2. ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ/197/ಬಿಆರ್‌ಎಸ್/2015, ದಿನಾಂಕ 9-3-2016
3. ಸರ್ಕಾರದ ಆದೇಶ ಸಂ.ಗ್ರಾಅಪ/41/ಗ್ರಾನೀಸ(2)/2015(ಭಾ-4), ಬೆಂಗಳೂರು, ದಿನಾಂಕ 11-03-2016
4. ಸರ್ಕಾರದ ಸುತ್ತೋಲೆ ಸಂ.ಗ್ರಾಅಪ/41/ಗ್ರಾನೀಸ(2)/2015, ದಿನಾಂಕ 6-02-2016

**<u>ಪೀಠಿಕೆ:</u>**

ಮೇಲೆ ಓದಲಾದ ಉಲ್ಲೇಖ (1) ರಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪ ಯೋಜನೆ ಲೆಕ್ಕ ಶೀರ್ಷಿಕೆ 2215-01-102-9-08-422 (ಯೋಜನೆ) ಯಡಿ ರೂ.12200.00 ಲಕ್ಷಗಳ ಹಾಗೂ ಗಿರಿಜನ ಉಪ ಯೋಜನೆ ಲೆಕ್ಕ ಶೀರ್ಷಿಕೆ 2215-01-102-9-08-423 (ಯೋಜನೆ) ಯಡಿ ರೂ.4070.00 ಲಕ್ಷಗಳ ಹೆಚ್ಚುವರಿ ಅನುದಾನ ಒದಗಿಸುವಂತೆ ಪ್ರಸ್ತಾಪಿಸಲಾಗಿತ್ತು. ಈ ಸಂಬಂಧ ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆಗೆ ಲೆಕ್ಕ ಶೀರ್ಷಿಕೆ 2215-01-102-9-08-422 (ಯೋಜನೆ) ಯಡಿ ರೂ.12200.00 ಲಕ್ಷಗಳನ್ನು ಹಾಗೂ ಗಿರಿಜನ ಉಪ ಯೋಜನೆ ಲೆಕ್ಕ ಶೀರ್ಷಿಕೆ 2215-01-102-9-08-423 (ಯೋಜನೆ) ಯಡಿ ರೂ.4070.00 ಲಕ್ಷಗಳ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಮಂಜೂರಾತಿ ನೀಡಿರುವ ಹಿನ್ನೆಲೆಯಲ್ಲಿ ಉಲ್ಲೇಖ (3) ರ ಸರ್ಕಾರದ ಆದೇಶದನ್ವಯ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆಗೆ (SCP) ಲೆಕ್ಕ ಶೀರ್ಷಿಕೆ 2215-01-102-9-08-422 (ಯೋಜನೆ) ಯಡಿ ರೂ.12200.00 ಲಕ್ಷಗಳನ್ನು ಹಾಗೂ ಗಿರಿಜನ ಉಪಯೋಜನೆ (TSP) ಲೆಕ್ಕ ಶೀರ್ಷಿಕೆ 2215-01-102-9-08-423 (ಯೋಜನೆ) ಯಡಿ ರೂ.4070.00 ಲಕ್ಷಗಳನ್ನು ಖಜಾನೆಯಿಂದ ಸೆಳೆದು **SWSM - ಸಿಂಡಿಕೇಟ್ ಬ್ಯಾಂಕ್** ಉಳಿತಾಯ ಖಾತೆ ಸಂಖ್ಯೆ: 044620100915777 ಗೆ ಬ್ಯಾಂಕ್‌ನ ಮುಖ್ಯ ಖಾತೆಗೆ ಜಮೆ ಮಾಡಲಾಗಿರುತ್ತದೆ. ಪ್ರಸ್ತುತ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (SCP) ಯಡಿ ರೂ.12200.00 ಲಕ್ಷಗಳನ್ನು ಹಾಗೂ ಗಿರಿಜನ ಉಪಯೋಜನೆ (TSP) ಯಡಿ ರೂ.4070.00 ಲಕ್ಷಗಳ ಅನುದಾನವನ್ನು ರಾಜ್ಯದ 30 ಜಿಲ್ಲೆಗಳಿಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

## <u>ಸರ್ಕಾರದ ಆದೇಶ ಸಂ.ಗ್ರಾಅಪ/41/ಗ್ರಾನೀಸ(2)/2015(ಭಾ-4), ಬೆಂಗಳೂರು, ದಿನಾಂಕ 16-03-2016</u>

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆಗೆ ಲೆಕ್ಕ ಶೀರ್ಷಿಕೆ 2215-01-102-9-08-422 (ಯೋಜನೆ) ಯಡಿ ರೂ.12200.00 ಲಕ್ಷಗಳನ್ನು ಹಾಗೂ ಗಿರಿಜನ ಉಪ ಯೋಜನೆ ಲೆಕ್ಕ ಶೀರ್ಷಿಕೆ 2215-01-102-9-08-423 (ಯೋಜನೆ) ಯಡಿ ರೂ.4070.00 ಲಕ್ಷಗಳ ಅನುದಾನವನ್ನು **<u>ಅನುಬಂಧ</u>** ದಲ್ಲಿ ಸೂಚಿಸಲಾಗಿರುವಂತೆ ರಾಜ್ಯದ 30 ಜಿಲ್ಲೆಗಳಿಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪಯೋಜನೆ (TSP) ಯಡಿ ಕಳುಹಿಸುವ ಬಿಲ್ಲುಗಳನ್ನು ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

4. ಮೇಲ್ಕಂಡ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಅಡಿ ಮಾತ್ರ ವಿನಿಯೋಗಿಸತಕ್ಕದ್ದು.

5. ಮೇಲ್ಕಂಡ ಅನುದಾನವನ್ನು ಕ್ರಿಯಾ ಯೋಜನೆಯಡಿ ಅನುಮೋದಿತವಾಗಿರುವ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಅಡಿಯ ಬಿಲ್ಲುಗಳ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.

6. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು. ಹಾಗೂ ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಸಂಬಂಧಪಟ್ಟ ಕಾಮಗಾರಿಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಇಂದೀಕರಿಸಿ ದಾಖಲಿಸತಕ್ಕದ್ದು.

7. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು. ಹಾಗೂ ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಸಂಬಂಧಪಟ್ಟ ಕಾಮಗಾರಿಗ್ಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಇಂದೀಕರಿಸಿ ದಾಖಲಿಸತಕ್ಕದ್ದು.

8. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಹಾಗೂ ಅನುದಾನವನ್ನು 31ನೇ ಮಾರ್ಚ್ 2016 ರೊಳಗೆ ಖರ್ಚು ಭರಿಸಲು ಕ್ರಮ ವಹಿಸತಕ್ಕದ್ದು.

9. ಈ ಆದೇಶವನ್ನು ಆರ್ಥಿಕ ಇಲಾಖೆಯು ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಅಡಿಯ ಯೋಜನೆಯ ಸಲುವಾಗಿ ಹೊರಡಿಸಿರುವ ಆದೇಶ ಸಂಖ್ಯೆ: ಆಇ/197/ಬಿಆರ್‌ಎಸ್/2015, ದಿನಾಂಕ 9-3-2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಕೃಷ್ಣಪ್ಪ)
ಸರ್ಕಾರದ ಉಪಕಾರ್ಯದರ್ಶಿ (ಗ್ರಾನೀಸ) (ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಫೋನ್ & ಫ್ಯಾಕ್ಸ್: 080-22233175

<u>ಪ್ರತಿಯನ್ನು :</u>

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ರಾಜ್ಯದ 30 ಜಿಲ್ಲೆಗಳು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ 30 ಜಿಲ್ಲೆಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
8. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
13. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ 30 ಜಿಲ್ಲೆಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
17. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ರಾಜ್ಯದ 31 ವಿಭಾಗ ಕಛೇರಿಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಪೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾ.ಅ.ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಅನುಬಂಧ

## ಸರ್ಕಾರದ ಆದೇಶ ಸಂ.ಗ್ರಾಅಪ/41/ಗ್ರಾನೀಸ(2)/2015(ಭಾ-4), ಬೆಂಗಳೂರು, ದಿನಾಂಕ 16-03-2016 ರ ಲಗತ್ತು

2015-16ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ 2215 (ಯೋಜನೆ) ಅಡಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಯಡಿ ಬಿಡುಗಡೆ ಮಾಡಲಾದ ಹೆಚ್ಚುವರಿ ಅನುದಾನ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆ | SCP & TSP ಅಡಿ ಬಿಡುಗಡೆ ಮಾಡಲಾದ ಹೆಚ್ಚುವರಿ ಅನುದಾನ | | |
|---|---|---|---|---|
| | | ಎಸ್.ಸಿ.ಪಿ. | ಟಿ.ಎಸ್.ಪಿ. | ಒಟ್ಟು |
| 1 | 2 | 3 | 4 | 5 |
| 1 | ಬಾಗಲಕೋಟೆ | 4.48 | 1.50 | 5.98 |
| 2 | ಬೆಂಗಳೂರು(ಗ್ರಾ) | 1.92 | 0.64 | 2.56 |
| 3 | ಬೆಂಗಳೂರು(ನ) | 1.49 | 0.50 | 1.99 |
| 4 | ಬೆಳಗಾಂ | 9.83 | 3.28 | 13.11 |
| 5 | ಬಳ್ಳಾರಿ | 6.40 | 2.14 | 8.54 |
| 6 | ಬೀದರ್ | 5.33 | 1.78 | 7.11 |
| 7 | ಬಿಜಾಪುರ | 6.79 | 2.27 | 9.06 |
| 8 | ಚಾಮರಾಜನಗರ | 3.99 | 1.33 | 5.32 |
| 9 | ಚಿಕ್ಕಬಳ್ಳಾಪುರ | 2.50 | 0.83 | 3.33 |
| 10 | ಚಿಕ್ಕಮಗಳೂರು | 4.00 | 1.34 | 5.34 |
| 11 | ಚಿತ್ರದುರ್ಗ | 5.90 | 1.97 | 7.87 |
| 12 | ದಕ್ಷಿಣಕನ್ನಡ | 1.40 | 0.47 | 1.87 |
| 13 | ದಾವಣಗೆರೆ | 4.86 | 1.62 | 6.48 |
| 14 | ಧಾರವಾಡ | 2.53 | 0.84 | 3.37 |
| 15 | ಗದಗ | 2.71 | 0.90 | 3.61 |
| 16 | ಗುಲ್ಬರ್ಗಾ | 8.64 | 2.88 | 11.52 |
| 17 | ಹಾಸನ | 4.64 | 1.55 | 6.19 |
| 18 | ಹಾವೇರಿ | 3.95 | 1.32 | 5.27 |
| 19 | ಕೊಡಗು | 0.76 | 0.25 | 1.01 |
| 20 | ಕೋಲಾರ | 1.89 | 0.63 | 2.52 |
| 21 | ಕೊಪ್ಪಳ | 4.75 | 1.58 | 6.33 |
| 22 | ಮಂಡ್ಯ | 2.73 | 0.91 | 3.64 |
| 23 | ಮೈಸೂರು | 5.88 | 1.96 | 7.84 |
| 24 | ರಾಯಚೂರು | 6.80 | 2.27 | 9.07 |
| 25 | ರಾಮನಗರ | 2.82 | 0.94 | 3.76 |
| 26 | ಶಿವಮೊಗ್ಗ | 2.00 | 0.67 | 2.67 |
| 27 | ತುಮಕೂರು | 7.46 | 2.49 | 9.95 |
| 28 | ಉಡುಪಿ | 1.12 | 0.37 | 1.49 |
| 29 | ಉತ್ತರ ಕನ್ನಡ | 1.76 | 0.59 | 2.35 |
| 30 | ಯಾದಗಿರಿ | 2.67 | 0.88 | 3.55 |
| ಒಟ್ಟು | | 122.00 | 40.70 | 162.70 |

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾ.ನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.